# ಶ್ರೀ ಜಯಚಾಮರಾಜ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್.,

**ಪ್ರಧಾನ ಕಛೇರಿ**:- ನಂ:21/1, ಶ್ರೀ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ ರಸ್ತೆ, ಮರದಹಳ್ಳಿ, ಬೆಂಗಳೂರು-560032.ದೂ: 080-23335269, 23534204.

ಎಸ್.ಜೆ.ಸಿ.ಸಿ.ಎಸ್/ 206/2022-23 ದಿನಾಂಕ:-18/01/2023.

**ಅಧಿಸೂಚನೆ**

ಶ್ರೀ ಜಯಚಾಮರಾಜ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ 21/1, ಶ್ರೀ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ ರಸ್ತೆ, ಮರದಹಳ್ಳಿ, ಬೆಂಗಳೂರು-560032. ಈ ಸಹಕಾರ ಸೊಸೈಟಿಯಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳನ್ನು "ಗುತ್ತಿಗೆ ಆಧಾರದ" ಮೇಲೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ನಿಯಮಾವಳಿಗಳು 1960ರ ನಿಯಮ 17(4) ರಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಸೂಚನೆಯನ್ನು ಸಂಘದ Website:www.sjccsl.com ನಲ್ಲೂ ಹಾಗೂ ದಿನಾಂಕ **18/01/2023** ಕನ್ನಡ ಪ್ರಭ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

1. **ಹುದ್ದೆಗಳ ವಿವರ** :-

| ಕ್ರಮ ಸಂಖ್ಯೆ | ಪದನಾಮ | ಹುದ್ದೆಗಳ ಸಂಖ್ಯೆ | ಗುತ್ತಿಗೆ ಅವಧಿ | ಕ್ರೂಢೀಕೃತ ವೇತನ (ಮಾಹೆಯಾನ) |
|---|---|---|---|---|
| 1 | ದ್ವಿತೀಯ ದರ್ಜೆ ಸಹಾಯಕ | 02 | 11 ತಿಂಗಳು | ರೂ. 18,000/- |
| 2 | ಡ್ರೈವರ್ ಕಂ ಅಟೆಂಡರ್ | 01 | 11 ತಿಂಗಳು | ರೂ. 16,000/- |

ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ:- 18/01/2023

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ :- 29/01/2023

1. **ಭರ್ತಿ ಮಾಡಿದ ಅರ್ಜಿಯನ್ನು ಖುದ್ದಾಗಿ ಸೊಸೈಟಿಗೆ ಸಲ್ಲಿಸಬೇಕು. ಒಂದು ಬಾರಿ ಅರ್ಜಿ ಸಲ್ಲಿಸಿದ ನಂತರ ಯಾವುದೇ ಬದಲಾವಣೆ ಅವಕಾಶವಿರುವುದಿಲ್ಲ. ಬದಲಾವಣೆ ಕೋರಿ ಸಲ್ಲಿಸುವ ಮನವಿಗಳನ್ನು ತಿರಸ್ಕರಿಸಲಾಗುವುದು.**

2. **ಅರ್ಜಿ ಶುಲ್ಕ** :- ರೂ.500/- ಗಳನ್ನು ಪಾವತಿಸಿ ಅರ್ಜಿ ಪಡೆಯುವುದು.(ಈಗಾಗಲೇ ಅರ್ಜಿಸಲ್ಲಿಸಿರುವ ಅಭ್ಯರ್ಥಿಗಳು ರೂ.300/-ಗಳನ್ನು ಪಾವತಿಸಿ ಹೊಸ ಅರ್ಜಿ ಪಡೆದು ಪುನಃ ಸಲ್ಲಿಸುವುದು)

3. **ಅರ್ಹತಾ ಷರತ್ತುಗಳು**:-

ಅ) ಭಾರತೀಯ ನಾಗರೀಕರಾರತಕ್ಕದ್ದು ಮತ್ತು ಆಧಾರ್ ಸಂಖ್ಯೆಯನ್ನು ಹೊಂದಿರಬೇಕು.(ಖಾಯಂ/ತಾತ್ಕಾಲಿಕ ವಿಳಾಸ ನಮೂದಾಗಿರ ಬೇಕು)

ಆ) ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ದೃಢೀಕರಣ ಪತ್ರದ ಮೇಲೆ ಅಭ್ಯರ್ಥಿಯು ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಸೊಸೈಟಿ ಕಾಯ್ದಿರಿಸಿಕೊಂಡಿದೆ. ನಿಗದಿತ-ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ನಿಬಂಧನೆಗಳನ್ನು ಪೂರೈಸುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

4. **ನೇಮಕಾತಿ ವಿಧಾನ** :-

ಲಿಖಿತ ಪರೀಕ್ಷೆ ಮತ್ತು ಸಂದರ್ಶನ ನಡೆಸಲಾಗುವುದು.

4.1 **ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ**:- ಎಸ್.ಎಸ್.ಎಲ್.ಸಿ ಅಥವಾ ಇದಕ್ಕೆ ತತ್ಸಮಾನವಾದ ರಾಜ್ಯ ಸರಕಾರದಿಂದ ಘೋಷಿಸಲ್ಪಟ್ಟ ಇತರೆ ಯಾವುದೇ ಪರೀಕ್ಷೆಯನ್ನು ಅಥವಾ ಎಸ್.ಎಸ್.ಎಲ್.ಸಿ ಪರೀಕ್ಷೆಗಿಂತ ಮೇಲ್ಪಟ್ಟ ಯಾವುದೇ ಪರೀಕ್ಷೆಯಲ್ಲಿ ಕನ್ನಡವನ್ನು ಮುಖ್ಯ ಭಾಷೆಯಾಗಿ ಅಥವಾ ದ್ವಿತೀಯ ಭಾಷೆಯಾಗಿ ಅಥವಾ ಐಚ್ಛಿಕ ವಿಷಯವಾಗಿ ಅಥವಾ ಮೇಲಿನ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ತೇರ್ಗಡೆ ಆಗಿರಬೇಕು.

4.2 **<u>ಸ್ಪರ್ಧಾತ್ಮಕ ಪರೀಕ್ಷೆ ವಿಧಾನ</u>**:- ಲಿಖಿತ ಪರೀಕ್ಷೆಯು ಒಟ್ಟು 100 ಅಂಕಗಳನ್ನು ಒಳಗೊಂಡಿರುತ್ತದೆ.

| | | |
|---|---|---|
| 1 | ಕನ್ನಡ ಭಾಷಾ ಪರೀಕ್ಷೆ | 25 ಅಂಕಗಳು |
| 2 | ಸಾಮಾನ್ಯ ಆಂಗ್ಲ ಭಾಷೆ | 25 ಅಂಕಗಳು |
| 3 | ಸಾಮಾನ್ಯ ಜ್ಞಾನ | 25 ಅಂಕಗಳು |
| 4 | ಸಹಕಾರ ವಿಷಯಕ್ಕೆ ಸಂಬಂಧಿಸಿದ ವಿಷಯಗಳು | 25 ಅಂಕಗಳು |

ಸ್ಪರ್ಧಾತ್ಮಕ ಪರೀಕ್ಷೆಗೆ ಅಭ್ಯರ್ಥಿಗಳು ಅವರ ಪ್ರವೇಶ ಪತ್ರ (ಸೊಸೈಟಿಯಿಂದ ನೀಡಿರುವ) ಹಾಗೂ ಮೂಲ ಗುರುತಿನ ಚೀಟಿಯನ್ನು (ವೋಟರ್ ಐ.ಡಿ/ ಪ್ಯಾನ್ ಕಾರ್ಡ್/ಆಧಾರ್‌ಕಾರ್ಡ್/ ಪಾಸ್ ಪೋರ್ಟ್/ ಡ್ರೈವಿಂಗ್ ಲೈಸನ್ಸ್) ಕಡ್ಡಾಯವಾಗಿ ಹಾಜರುಪಡಿಸಬೇಕು. ತಪ್ಪಿದಲ್ಲಿ ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ನೀಡಲಾಗುವುದಿಲ್ಲ.

**ಸೂಚನೆ:- ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು**.

4.3 **<u>ಸಂದರ್ಶನ / ಮೂಲ ದಾಖಲಾತಿ ಪರಿಶೀಲನೆ</u>**:-. ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು ಮತ್ತು ಸಂದರ್ಶನದಲ್ಲಿ ಪಡೆದ ಅಂಕಗಳನ್ನು ಸೇರಿಸಿ ಅಂತಿಮ ಆಯ್ಕೆಪಟ್ಟಿ ತಯಾರಿಸಲಾಗುವುದು. ಇದೇ ಸಮಯದಲ್ಲಿ ಮೂಲ ದಾಖಲಾತಿಗಳನ್ನು ಪರಿಶೀಲಿಸಲಾಗುವುದು.

**<u>ಮೂಲ ದಾಖಲಾತಿ ಪರಿಶೀಲನೆ/ ಸಂದರ್ಶನಕ್ಕೆ ಅಭ್ಯರ್ಥಿಗಳು ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು</u>**.

5. **<u>ಶೈಕ್ಷಣಿಕ ವಿದ್ಯಾರ್ಹತೆ ಮತ್ತು ವಯೋಮಿತಿ</u>**:-

| | | |
|---|---|---|
| **ದ್ವಿತೀಯ ದರ್ಜೆ ಸಹಾಯಕ** | ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಓದುವ ಮತ್ತು ಬರೆಯುವ ಜ್ಞಾನ ಹೊಂದಿರಬೇಕು. ಸರ್ಕಾರದಿಂದ ಅಂಗೀಕೃತಗೊಂಡ ಸಂಸ್ಥೆಯಿಂದ ಕಂಪ್ಯೂಟರ್ ಆಪರೇಷನ್ ಮತ್ತು ಅಪ್ಲಿಕೇಷನ್ ಕೋರ್ಸ್‌ನ್ನು ಮಾಡಿರಬೇಕು. | **<u>ವಯೋಮಿತಿ</u>**:-<br>1)ಸಾಮಾನ್ಯ ಅಭ್ಯರ್ಥಿಗಳಿಗೆ:<br>18 ವರ್ಷದಿಂದ 35 ವರ್ಷಗಳು<br><br>2) ಪ್ರವರ್ಗ 2ಎ/2ಬಿ/3ಎ/3ಬಿ :<br>18 ವರ್ಷದಿಂದ 38 ವರ್ಷಗಳು<br><br>3) ಪ.ಜಾ/ಪ.ಪಂ/ಪ್ರವರ್ಗ-1:<br>18 ವರ್ಷದಿಂದ 40 ವರ್ಷಗಳು |
| **ಡ್ರೈವರ್ ಕಂ ಅಟೆಂಡರ್** | ಅ) ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಲಘು ವಾಹನ ಪರವಾನಿಗೆ ಹೊಂದಿದ್ದು ಚಾಲ್ತಿಯಲ್ಲಿ ಇರಬೇಕು.<br>ಆ) ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು ಕನ್ನಡ ಓದಲು ಮತ್ತು ಬರೆಯಲು ತಿಳಿದಿರಬೇಕು. | |

6. **<u>ಜಾತಿ/ ಮೀಸಲಾತಿ ಪ್ರಮಾಣ ಪತ್ರ</u>**:- ಪ.ಜಾ/ ಪ.ಪಂ /ಪ್ರವರ್ಗ-1 ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ (2ಎ,2ಬಿ,3ಎ,3ಬಿ) ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ನಿಗದಿತ ನಮೂನೆಯಲ್ಲಿ ಚಾಲ್ತಿಯಲ್ಲಿರುವ ಜಾತಿ/ ಮೀಸಲಾತಿ ಪ್ರಮಾಣ ಪತ್ರಗಳನ್ನು ನಿಗದಿಪಡಿಸಿದ ದಿನಾಂಕದೊಳಗೆ ಪಡೆದುಕೊಂಡಿರತಕ್ಕದ್ದು. ಮೀಸಲಾತಿ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರು ಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಪಡಿಸಲಾಗುವುದು.

7. <u>**ಪ್ರಮುಖ ಸೂಚನೆಗಳು**:-</u>

1. ಅಭ್ಯರ್ಥಿಗಳು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ **2** ಭಾವಚಿತ್ರಗಳಲ್ಲಿ **ಒಂದನ್ನು** ಅರ್ಜಿಗೆ ಅಂಟಿಸಿ ಸಹಿ ಮಾಡಿರಬೇಕು. ಭಾವಚಿತ್ರ ಹಾಗೂ ಸಹಿ ಇರದ ಅರ್ಜಿಗಳನ್ನು ತಿರಸ್ಕರಸಲಾಗುವುದು. ಪರಿಶೀಲನೆಗೆ ಈ ಕೆಳಕಂಡ ಪ್ರಮಾಣ ಪತ್ರಗಳ ಮೂಲ ಪ್ರತಿ ಹಾಜರುಪಡಿಸಬೇಕು.

2. ವಿದ್ಯಾರ್ಹತೆಗೆ ಸಂಬಂಧಿಸಿದ ಅಂಕಪಟ್ಟಿಗಳನ್ನು ಮತ್ತು ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ಹಾಜರುಪಡಿಸಬೇಕು.

3. ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ ಶಾಲೆಯ ವರ್ಗಾವಣೆ ಪ್ರಮಾಣ ಪತ್ರ/ ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತಭಾಗ.

4. ಪ್ರ.ಜಾ/ ಪ.ಪಂ, ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ ಮತ್ತು ಪ್ರವರ್ಗ 3ಬಿ ಮೀಸಲಾತಿ ಪತ್ರಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಯಲ್ಲಿರಬೇಕು.

5. ಡ್ರೈವರ್ ಕಂ ಅಟೆಂಡರ್ ಹುದ್ದೆಗೆ ಅರ್ಜಿಸಲ್ಲಿಸುವ ಅಭ್ಯರ್ಥಿಗಳು ತಮ್ಮ ಚಾಲ್ತಿಯಲ್ಲಿರುವ ಚಾಲನ ಪರವಾನಗಿ (Driving License) ಪ್ರತಿ ಲಗತಿಸಬೇಕು.

6. ಶುಲ್ಕ ಪಾವತಿಸಲು ಕೊನೆಯ ದಿನಾಂಕದೊಳಗೆ ಅರ್ಜಿಯೊಂದಿಗೆ ಪಾವತಿಸತಕ್ಕದ್ದು.

7. <u>**ದುರ್ನಡತೆ**:-</u>

   ಒಬ್ಬ ಅಭ್ಯರ್ಥಿಯು ನಕಲು ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜು ಸಲ್ಲಿಸಿರುವುದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವುದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವುದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವುದಾಗಿ ಅಥವಾ ಅನುಸರಿಸಲು ಪ್ರಯತ್ನಿಸುತ್ತಿರುವುದಾಗಿ ಅಥವಾ ಅವರ ನೇಮಕಾತಿಯ ಸಂದರ್ಭದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವುದು ಕಂಡು ಬಂದಲ್ಲಿ ಅವನು/ಅವಳು ಸ್ವತಃ ಕ್ರಿಮಿನಲ್ ವ್ಯವಹಾರಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ. ಹುದ್ದೆಯ ಸಂದರ್ಶನದಿಂದ/ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

8. <u>**ಅರ್ಜಿ ಸಲ್ಲಿಸಲು ನಿರ್ಬಂಧ**:-</u>

1. ಯಾವುದೇ ನಿಷೇಧಿತ ಸಂಘ ಸಂಸ್ಥೆಯ ಸದಸ್ಯನಾಗಿರುವಲ್ಲಿ ಅಥವಾ ಸದಸ್ಯನಾಗಿದ್ದಲ್ಲಿ ಅಥವಾ ಯಾವುದೇ ನಿಷೇಧಿತ ಸಂಸ್ಥೆಯ ಕಾರ್ಯಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲಿ.

2. ಭಾರತ ಸಂವಿಧಾನಕ್ಕೆ ಚ್ಯುತಿ ತರುವ ಕಾರ್ಯದಲ್ಲಿ ಪ್ರವೃತ್ತನಾದಲ್ಲಿ.

3. ಕಾನೂನು ಭಂಗ ಮಾಡಿ ಹಿಂಸಾ ಕೃತ್ಯದಲ್ಲಿ ತೊಡಗಿಕೊಂಡಿದ್ದಲ್ಲಿ.

4. ಭಾರತ ದೇಶದ ಸಾರ್ವಭೌಮ ಹಾಗೂ ಸುಭದ್ರತೆಗೆ ಧಕ್ಕೆ ತರುವ ಕಾರ್ಯದಲ್ಲಿ ತೊಡಗಿಕೊಂಡಿದ್ದಲ್ಲಿ.

5. ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಸೇವೆಯಿಂದ ಉಚ್ಚಾಟನೆಗೊಂಡಿದ್ದಲ್ಲಿ.

9. <u>**ನೇಮಕಾತಿ ಪ್ರಕ್ರಿಯೆಯಲ್ಲಿ ನೇಮಕಾತಿ ಸಮಿತಿ ಹಾಗೂ ಆಡಳಿತ ಮಂಡಳಿ ತೀರ್ಮಾನವೇ ಅಂತಿಮವಾಗಿರುತ್ತದೆ.**</u>

ಸಹಿ/-
(ಶ್ರೀ ನಾಗರಾಜ್.ಆರ್)
ಸಂಚಾಲಕ ಸದಸ್ಯರು
ಸಿಬ್ಬಂದಿ ನೇಮಕಾತಿ ಸಮಿತಿ
ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ

ಸಹಿ/-
(ಎಸ್.ಮುನಿನಾಗಲು)
ಅಧ್ಯಕ್ಷರು ಸಿಬ್ಬಂದಿ ನೇಮಕಾತಿ
ಸಮಿತಿ ಹಾಗೂ ಅಧ್ಯಕ್ಷರು.

ಸ್ಥಾಪನೆ : 1974

# ಶ್ರೀ ಜಯಚಾಮರಾಜ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್.,

**ಪ್ರಧಾನ ಕಛೇರಿ**:- ನಂ:21/1, ಶ್ರೀ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ ರಸ್ತೆ, ಮಠದಹಳ್ಳಿ, ಬೆಂಗಳೂರು-560032.ದೂ: 080-23335269, 23534204.
**ಸುಲ್ತಾನ್ ಪಾಳ್ಯ ಶಾಖೆ**:- ನಂ:34, 1ನೇ ಮುಖ್ಯ ರಸ್ತೆ, 6ನೇ ಅಡ್ಡ ರಸ್ತೆ, ವಿಜಯ ಭಾರತಿ ಶಾಲೆ ರಸ್ತೆ, ಭುವನೇಶ್ವರಿ ನಗರ, ಆರ್.ಟಿ ನಗರ ಬೆಂಗಳೂರು-560032.ದೂ::23542364.
**ಬಾಗಲಗುಂಟೆ ಶಾಖೆ**:ನಂ:330/ಬಿ , 60 ಅಡಿ ರಸ್ತೆ, 7ನೇ ಮುಖ್ಯರಸ್ತೆ, ಎಂ.ಇ.ಐ ಲೇಔಟ್, ಬಾಗಲಗುಂಟೆ, ನಾಗಸಂದ್ರ ಅಂಚೆ, ಬೆಂಗಳೂರು-560073.ದೂ:080-28390799.

## ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಅರ್ಜಿ

**Passport size colour Photo to be affixed**

| | | | | | | |
|---|---|---|---|---|---|---|
| 1 | ಅಭ್ಯರ್ಥಿಯ ಪೂರ್ಣ ಹೆಸರು (ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯಲ್ಲಿರುವಂತೆ) ಬಿಡಿ ಅಕ್ಷರಗಳಲ್ಲಿ | | | | | |
| 2 | ತಂದೆ/ಪತಿಯ ಹೆಸರು(ಅನ್ವಯಿಸುವುದನ್ನು ✓ ಗುರುತಿಸುವುದು | | | | | |
| 3 | ಜನ್ಮ ದಿನಾಂಕ | | | | | |
| 4 | ಲಿಂಗ | | | | | |
| 5 | ವಿವಾಹಿತರೇ ? | | ಹೌದು | | ಇಲ್ಲ | |
| 6 | ಆಧಾರ್ ಸಂಖ್ಯೆ | | | | | |
| 7 | ಜಾತಿ/ವರ್ಗ | | | | | |
| 8 | ವಿದ್ಯಾರ್ಹತೆ<br>(ಸಂಬಂಧಿತ ಪ್ರಮಾಣ ಪತ್ರಗಳ ನಕಲು ಪ್ರತಿಗಳನ್ನು ಸ್ವ-ರುಜುನೊಂದಿಗೆ ದೃಢೀಕರಿಸಿ ಲಗತ್ತಿಸಬೇಕು) | | | | | |
| 9 | ಎಸ್.ಎಸ್.ಎಲ್.ಸಿ ಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ತೆಗೆದುಕೊಂಡು ತೇರ್ಗಡೆ ಆಗಿರುವಿರಾ? | ಹೌದು | | | ಇಲ್ಲ | |
| 10 | ಖಾಯಂ ಅಂಚೆ ವಿಳಾಸ (ಆಧಾರ್ ಕಾರ್ಡ್‌ನಲ್ಲಿ ಇರುವಂತೆ) | | | | | |
| 11 | ತಾತ್ಕಾಲಿಕ ಅಂಚೆ ವಿಳಾಸ (ಪುರಾವೆಯನ್ನು ಒದಗಿಸುವುದು) | | | | | |
| 12 | ಕೆಲಸದ ಅನುಭವ ಯಾವುದಾದರೂ ಇದ್ದರೆ ? | | | | | |
| 13 | ಮೊಬೈಲ್/ದೂರವಾಣಿ ಸಂಖ್ಯೆ | | | | | |
| 14 | ಇ-ಮೇಲ್ ಐಡಿ ನಮೂದಿಸಿ | | | | | |

ಅಭ್ಯರ್ಥಿಯ ಸಹಿ

ಸ್ಥಳ:
ದಿನಾಂಕ:-

ಸ್ಥಾಪನೆ : 1974

# ಶ್ರೀ ಜಯಚಾಮರಾಜ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್.,


**ಪ್ರಧಾನ ಕಛೇರಿ**:- ನಂ:21/1, ಶ್ರೀ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ ರಸ್ತೆ, ಮಠದಹಳ್ಳಿ, ಬೆಂಗಳೂರು-560032.ದೂ: 080-23335269, 23534204.

**ಸುಲ್ತಾನ್ ಪಾಳ್ಯ ಶಾಖೆ**:- ನಂ:34, 1ನೇ ಮುಖ್ಯ ರಸ್ತೆ, 6ನೇ ಅಡ್ಡ ರಸ್ತೆ, ವಿಜಯ ಭಾರತಿ ಶಾಲೆ ರಸ್ತೆ, ಭುವನೇಶ್ವರಿ ನಗರ, ಆರ್.ಟಿ ನಗರ ಬೆಂಗಳೂರು-560032.ದೂ::23542364.

**ಬಾಗಲಗುಂಟೆ ಶಾಖೆ**:ನಂ:330/ಬಿ , 60 ಅಡಿ ರಸ್ತೆ, 7ನೇ ಮುಖ್ಯರಸ್ತೆ, ಎಂ.ಇ.ಐ ಲೇಔಟ್, ಬಾಗಲಗುಂಟೆ, ನಾಗಸಂದ್ರ ಅಂಚೆ, ಬೆಂಗಳೂರು-560073.ದೂ:080-28390799.


## ಡ್ರೈವರ್ ಕಂ ಅಟೆಂಡರ್ ಹುದ್ದೆಗೆ ಅರ್ಜಿ

**Passport size colour Photo to be affixed**

| | | | | | |
|---|---|---|---|---|---|
| 1 | ಅಭ್ಯರ್ಥಿಯ ಪೂರ್ಣ ಹೆಸರು (ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯಲ್ಲಿರುವಂತೆ) ಬಿಡಿ ಅಕ್ಷರಗಳಲ್ಲಿ | | | | |
| 2 | ತಂದೆ/ಪತಿಯ ಹೆಸರು(ಅನ್ವಯಿಸುವುದನ್ನು ✓ ಗುರುತಿಸುವುದು | | | | |
| 3 | ಜನ್ಮ ದಿನಾಂಕ | | | | |
| 4 | ಲಿಂಗ | | | | |
| 5 | ವಿವಾಹಿತರೇ ? | | ಹೌದು | | ಇಲ್ಲ |
| 6 | ಅಭ್ಯರ್ಥಿಯ ಆಧಾರ್ ಸಂಖ್ಯೆ | | | | |
| 7 | ಜಾತಿ/ವರ್ಗ | | | | |
| 8 | ವಿದ್ಯಾರ್ಹತೆ<br>(ಸಂಬಂಧಿತ ಪ್ರಮಾಣ ಪತ್ರಗಳ ನಕಲು ಪ್ರತಿಗಳನ್ನು ಸ್ವ-ದೃಢೀಕರಿಸಿ ಲಗತ್ತಿಸಬೇಕು) | | | | |
| 9<br>10 | ಎಸ್.ಎಸ್.ಎಲ್.ಸಿ ಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ತೆಗೆದುಕೊಂಡು ತೇರ್ಗಡೆ ಆಗಿರುವಿರಾ? | ಹೌದು | | ಇಲ್ಲ | |
| 11 | ಖಾಯಂ ಅಂಚೆ ವಿಳಾಸ (ಆಧಾರ್ ಕಾರ್ಡ್‌ನಲ್ಲಿರುವಂತೆ) | | | | |
| 12 | ತಾತ್ಕಾಲಿಕ ಅಂಚೆ ವಿಳಾಸ (ಪುರಾವೆಯನ್ನು ಒದಗಿಸುವುದು) | | | | |
| 13 | ಮೊಬೈಲ್/ದೂರವಾಣಿ ಸಂಖ್ಯೆ | | | | |
| 14 | ಇ-ಮೇಲ್ ಐಡಿ ನಮೂದಿಸಿ | | | | |
| 15 | ಲಘು ವಾಹನ ಪರವಾನಿಗೆ ಹೊಂದಿರುವಿರಾ | ಹೌದು | | ಇಲ್ಲ | |
| 16 | ಲಘು ವಾಹನ ಪರವಾನಿಗೆ ಪಡೆದು ಎಷ್ಟು ವರ್ಷಗಳಾಗಿದೆ? | | | | |
| 17 | ಲಘು ವಾಹನ ಪರವಾನಿಗೆ ಸಂಖ್ಯೆ | | ಮುಗಿಯುವ ಅವಧಿ | | |
| 18 | ವಾಹನ ಚಾಲನಾ ಅನುಭವದ ಬಗ್ಗೆ | | | | |

ಅಭ್ಯರ್ಥಿಯ ಸಹಿ

ಸ್ಥಳ:

ದಿನಾಂಕ:-